ಎ) ಬಸಾಪುರ ಏತನೀರಾವರಿ ಯೋಜನೆಯ ಎರಡನೇ ಹಂತದ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿದ್ದು ಇದುವರೆವಿಗೆ 25% ಪ್ರಗತಿ ಸಾಧಿಸಲಾಗಿದೆ. 2ನೇ ಹಂತದ ಕಾಮಗಾರಿಗಳಲ್ಲಿ ರೈಸಿಂಗ್ ಮೇನ್ (ಕೊನೆಯ 300ಮೀ ಉದ್ದ) ಹಾಗೂ ಮುಖ್ಯ ಕಾಲುವೆಯ ಪ್ರಾರಂಭಿಕ ಕಿಲೋಮೀಟರ್ (1.90ಕಿಮಿ) ಮತ್ತು ಡೆಲಿವರಿ ಛೇಂಬರ್ ಅರಣ್ಯ ಪ್ರದೇಶದಲ್ಲಿ ಬರುತ್ತದೆ. ಬಸಾಪುರ ಏತನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಅರಣ್ಯ ಇಲಾಖೆಗೆ ಠೇವಣಿಯನ್ನು ಪಾವತಿಸಿದ್ದಾಗ್ಯೂ ಸಹ ಅರಣ್ಯ ಇಲಾಖೆಯವರು ನಿಗಮದ ಅಡಿ ಬರುವ ಮಾರ್ಕಾಂಡೇಯ ಯೋಜನೆಗಾಗಿ ಬಾಕಿ ಇರುವ ಮೊತ್ತವನ್ನು ಪಾವತಿಸಿದ ಹೊರತು ಅರಣ್ಯ ಪ್ರದೇಶದ ಬಿಡುಗಡೆ ಕಷ್ಟಸಾಧ್ಯವೆಂದು ತಿಳಿಸಿದ್ದ ಹಿನ್ನೆಲೆಯಲ್ಲಿ ಅರಣ್ಯ ಪ್ರದೇಶ ಬಿಡುಗಡೆ ವಿಳಂಬವಾಗಿರುತ್ತದೆ. ಪ್ರಸ್ತುತ ಅರಣ್ಯ ಪ್ರದೇಶ ಬಿಡುಗಡೆಗಾಗಿ ಎಲ್ಲಾ ಮೊತ್ತವನ್ನು ಪಾವತಿಸಿದ್ದು ಅಂತಿಮ ತೀರುವಳಿಯನ್ನು ಅರಣ್ಯ ಇಲಾಖೆಯಿಂದ ಪಡೆಯಲು ಕ್ರಮ ಜರುಗಿಸಲಾಗುತ್ತಿದೆ. ಸದರಿ ಕಾಮಗಾರಿಗಳನ್ನು 2014–15ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಏ) ಸದ್ಯಕ್ಕೆ ಸರ್ಕಾರದ ಮುಂದೆ ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಟ್ರೀ ಪಾರ್ಕ್ ಸ್ಥಾಪನೆ

2102(2492); ಶ್ರೀ ಮನೋಹರ್ ಎಚ್. ತಹಶೀಲ್ದಾರ್ (ಹಾನಗಲ್)

ಅ) ಹಾನಗಲ್ ಪಟ್ಟಣದ ನಗರದ ಪಕ್ಕದಲ್ಲಿಯೇ ಅರಣ್ಯ ಇಲಾಖೆಗೆ ಸೇರಿದ ಚಿಕನ್ ಕಾವಲು ಪ್ರದೇಶ ಇದ್ದು, ಇಲ್ಲಿ "ಟ್ರೀ ಪಾರ್ಕ್" **(Tree Park)** ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಹಾಗಿದ್ದಲ್ಲಿ, ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆ ಏನು; ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು? (ವಿವರ ನೀಡುವುದು)

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಟ್ರೀ ಪಾರ್ಕ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪ್ರಾಥಮಿಕ ಪರಿಶೀಲನೆ ಹಂತದಲ್ಲಿರುತ್ತದೆ.

ಬೃಹತ್ ಕಂಪನಿಗಳಿಂದ ಪರಿಸರ ಮಾಲಿನ್ಯ

2104(2741); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೃಹತ್ ಕಂಪನಿಗಳಿಂದ ಪರಿಸರ ಮಾಲಿನ್ಯ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪರಿಸರ ಮಾಲಿನ್ಯ ನಿರ್ಮೂಲನಕ್ಕೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಇ) ಪರಸರ ಮಾಲಿನ್ಯದ ವಿರುದ್ಧ ಜಾಗೃತಿ ಮೂಡಿಸಲು ಯಾವ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

ಈ) ಪರಿಸರ ಮಾಲಿನ್ಯದ ವಿರುದ್ಧ ಜಾಗೃತಿ ಮೂಡಿಸಲು ನಿಗದಿಪಡಿಸಿರುವ ಅನುದಾನವೆಷ್ಟು? (ವಿವರ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಉದ್ದಿಮೆಗಳಿಂದ ಉತ್ಪತ್ತಿಯಾಗುವ ಕಲ್ಮಶ ನೀರನ್ನು ಶುದ್ಧೀಕರಿಸಲು ಸಂಬಂಧಪಟ್ಟ ಉದ್ದಿಮೆಗಳು ಶುದ್ಧೀಕರಣ ಘಟಕಗಳನ್ನು ಅಳವಡಿಸಿದ್ದು ಸಂಸ್ಕರಿಸಿದ ಕಲ್ಮಶ ನೀರನ್ನು ಮರುಬಳಕೆ ಮಾಡಲಾಗುತ್ತಿದೆ. ಸಂಸ್ಕರಿಸಿದ ಕಲ್ಮಶ ನೀರಿನ ಮಾದರಿಗಳನ್ನು ಕಾಲಾನುಕಾಲಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ವಿಶ್ಲೇಷಿಸಲಾಗುತ್ತಿದೆ ಹಾಗೂ ಅವುಗಳು ಬಹುತೇಕ ಮಂಡಳಿ ನಿಗದಿಪಡಿಸಿದ ಮಾಪನಕ್ಕೆ ಸರಿಹೊಂದಿರುತ್ತವೆ.